ಬಗ್ಗೆ ನಾನು ಈಗಾಗಲೇ ಮಾನ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಕಳೆದ ವರ್ಷಕೂಡ ಕೇಳಿದಾಗ ಏಪ್ರಿಲ್ ಒಳಗಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಾಗಿ ಹೇಳಿದ್ದರು. ಈಗಾಗಲೇ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಪೈಪ್‌ಲೈನ್ ಕೂಡ ಅಲ್ಲಿ ಬಂದು ಬಿದ್ದಿದೆ. 3 ಕೋಟಿ 64 ಲಕ್ಷ ರೂಪಾಯಿಗಳ ಪೈಪ್‌ಲೈನ್‌ಗಳನ್ನು ಈಗ ಹಾಕುವುದಕ್ಕೆ ತರಿಸಿದ್ದಾರೆ. ಆದರೆ ಅಲ್ಲಿ ಜಲ ಶುದ್ಧೀಕರಣ ಘಟಕವನ್ನು ಕಟ್ಟಬೇಕಾಗಿದೆ. ಇದರ ಬಗ್ಗೆ ಈಗಾಗಲೇ ಲೋಯೆಸ್ಟ್ ಟೆಂಡರ್ ಕೂಡ ಬಂದಿದೆಯೆಂದು ಹೇಳಿದ್ದಾರೆ. ಅಲ್ಲಿ ಜಲ ಶುದ್ಧೀಕರಣ ಘಟಕವಾದರೆ ಇನ್ನು ಎರಡೂರು ತಿಂಗಳಲ್ಲಿ ನೀರನ್ನು ಬಿಡುವುದಕ್ಕೆ ಸಾಧ್ಯವಾಗುತ್ತದೆಯಾದ ಕಾರಣ ಜಲ ಶುದ್ಧೀಕರಣ ಘಟಕವನ್ನು ಮೊದಲು ಕಟ್ಟಬೇಕು. ಏಕೆಂದರೆ ಇಂದು ಸವಣೂರಿನಲ್ಲಿ ಒಂದು ತಿಂಗಳಿಗೊಮ್ಮೆ ಕುಡಿಯುವ ನೀರನ್ನು ಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೆಣ್ಣು ಮಕ್ಕಳು ಮತ್ತು ಸಾರ್ವಜನಿಕರು ಬೀದಿಗೆ ಇಳಿದಿದ್ದಾರೆ. ಆದುದರಿಂದ ಲೋಯೆಸ್ಟ್ ಟೆಂಡರ್ ಯಾರು ಹಾಕಿದ್ದಾರೋ ಅವರಿಗೆ ಅಥವಾ ಯಾರಿಗಾದರೂ ಕೆಲಸಕೊಟ್ಟು ಜಲ ಶುದ್ಧೀಕರಣ ಘಟಕವನ್ನು ಸರ್ಕಾರ ಬೇಗ ಕಟ್ಟಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಸಿ.ಎಂ. ಉದಾಸಿ :— ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಎಂ.ಎಸ್. ಪಾಟೀಲರ ಗಮನಕ್ಕೆ ತಂದು ಅಲ್ಲಿ ಶೀಘ್ರದಲ್ಲಿಯೇ ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

(ಓ) ವಿಟ್ಲ ಕ್ಷೇತ್ರದಲ್ಲಿ ಟ್ರಾಫಿಕ್ ಪೋಲೀಸ್ ಸ್ಟೇಶನ್ ತೆರೆಯುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ ವಿಧಾನಸಭಾ ಕ್ಷೇತ್ರ) :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಬಿ.ಸಿ. ರೋಡ್ ಅಭಿವೃದ್ಧಿ ಹೊಂದುತ್ತಿದೆ. ರಾಷ್ಟ್ರೀಯ ಹೆದ್ದಾರಿ 48 ಇದರ ಮಧ್ಯೆಯಲ್ಲಿ ಹಾದುಹೋಗುತ್ತಿದೆ. ತಾಲ್ಲೂಕಿನ ಹಲವಾರು ಗ್ರಾಮಗಳು ಇದಕ್ಕೆ ಸಂಪರ್ಕ ಹೊಂದಿರುವುದರಿಂದ ಜನಸಂಚಾರ ಮತ್ತು ವಾಹನ ಸಂಚಾರ ಜಾಸ್ತಿಯಾಗುತ್ತಿದೆ. ಈಗಿರುವ ಅಲ್ಲಿಯ ಪೋಲಿಸ್ ಠಾಣೆಯ ಪೋಲಿಸರಿಗೆ ಟ್ರಾಫಿಕ್ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಾಗಿ ಅಲ್ಲಿಗೆ ಟ್ರಾಫಿಕ್ ಪೋಲೀಸ್ ಠಾಣೆ ಬೇಕು ಎಂದು ವರದಿಯನ್ನೂ ಕೂಡ ಕಳುಹಿಸಲಾಗಿದೆ. ರೋಟರಿಯವರು ನಡೆಸಿದ ಅದಾಲತ್‌ನಲ್ಲಿ ಕೂಡ ಅಲ್ಲಿಗೆ ಟ್ರಾಫಿಕ್ ಪೋಲೀಸ್ ಸ್ಟೇಶನ್ ಬೇಕೆಂದು ಮನವಿಯನ್ನೂ ಕೂಡ ಕೊಡಲಾಗಿದೆ. ಆದುದರಿಂದ ಬಿ.ಸಿ. ರೋಡ್‌ಗೆ ಒಂದು ಟ್ರಾಫಿಕ್ ಪೋಲೀಸ್ ಸ್ಟೇಶನ್ ಮಂಜೂರು ಮಾಡಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ಗೃಹ ಸಚಿವರಿಗೆ ಸದರಿ ವಿಷಯವನ್ನು ತಿಳಿಸಿ ಉತ್ತರವನ್ನು ಮಾನ್ಯ ಸದಸ್ಯರಿಗೆ ಕಳುಹಿಸುವುದಕ್ಕೆ ನಾನು ವಿರ್ಪಾಡು ಮಾಡುತ್ತೇನೆ.